**<u>ದಿನಾಂಕ: 07.09.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ. ವಿ ಎಸ್ ಎ ವಕೀಲರಿಂದ</u>

ಮೃತ ಅಬ್ದುಲ್ ರೆಹಮಾನ ರವರ ತಾಯಿ ಇದ್ದಾರೆ. ಅವರ ತಾಯಿಯ ಹೆಸರು ಹಾಜರಾಬಿ ಕೋಂ.ಇಮಾಮಸಾಬ ಕೂಸನೂರು. ನನ್ನ ಗಂಡನ ತಂದೆ ಇಮಾಮಸಾಬ ರವರು ತೀರಿಕೊಂಡಿರುತ್ತಾರೆ. ಸದರಿ ನನ್ನ ಅತ್ತೆಯನ್ನು ಸೇರಿಸಿಲ್ಲ ಎಂದರೆ ಸರಿ. ನನಗೆ 2 ರಿಂದ 4 ಅರ್ಜಿದಾರರು ಮಾತ್ರ ಮಕ್ಕಳು. ನನ್ನ ಗಂಡ ತೀರಿಕೊಂಡಾಗ 56 ವರ್ಷ ವಯಸ್ಸು ಇತ್ತು ಎಂದರೆ ಸಾಕ್ಷಿ 50 ವಯಸ್ಸು ಇತ್ತು ಎನ್ನುತ್ತಾರೆ. 4 ನೇ ಅರ್ಜಿದಾರಳು ಮದುವೆಯಾಗಿ ಅವಳು ಗಂಡನ ಮನೆಯಲ್ಲಿ ವಾಸವಾಗಿದ್ದಾಳೆ. ನಾವು ಹಾಗೂ ನನ್ನ ಅತ್ತೆ ಮಾತ್ರ ಮೃತ ಅಬ್ದುಲ್

ರೆಹಮಾನ ಇಮಾಮಸಾಬ ಕೂಸನೂರು ರವರಿಗೆ ವಾರಸುದಾರರು ಎಂದು ತೋರಿಸುವ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

2. ನನ್ನ ಗಂಡ ತರಕಾರಿ ವ್ಯಾಪಾರ ಮಾಡುತ್ತಿದ್ದರು. ಸದರಿ ನನ್ನ ಗಂಡ ಸದರಿ ತರಕಾರಿ ವ್ಯಾಪಾರ ಮಾಡಲು ಪರವಾನಿಗೆ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ನನ್ನ ಗಂಡ ವ್ಯವಸಾಯ ಮಾಡುತ್ತಿದ್ದರು ನಮಗೆ ಒಂದೂವರೆ ಎಕರೆ ಜಮೀನು. ಸದರಿ ಜಮೀನು ನೀರಾವರಿ ಜಮೀನು. ಸದರಿ ಜಮೀನಿನಲ್ಲಿ ತರಕಾರಿ ಹಾಗೂ ಭತ್ತ ಬೆಳೆಯುತ್ತೇವೆ. ಸದರಿ ಜಮೀನಿನಲ್ಲಿಯೂ ಈಗಲೂ ಸಹ ಸದರಿ ಬೆಳೆಗಳನ್ನು ಬೆಳೆಯುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನು ಈಗ ಬರಡು ಭೂಮಿ ಆಗಿದೆ. ಸದರಿ ಜಮೀನು ಪಾಳು ಬಿದ್ದಿದೆ ಎಂದು ತೋರಿಸಲು ಅದರ ಆರ್ ಟಿ ಸಿ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಗಂಡ ಇದ್ದಾಗ ಸದರಿ ಜಮೀನಿನಿಂದ ನಮಗೆ ಎಷ್ಟು ಆದಾಯ ಬರುತ್ತೋ ಈಗಲೂ ಸಹ ಅಷ್ಟೇ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಿಂದ ನಮಗೆ ಈಗಲೂ ಸಹಅಷ್ಟೇ ಆದಾಯ ಬರುತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ಅಪಘಾತ ದಿನ ನನ್ನ ಗಂಡ ಮೋಟಾರ ಸೈಕಲ್ ಚಾಲನೆ ಮಾಡುತ್ತಿದ್ದರು. ಸದರಿ ನನ್ನ ಗಂಡನಿಗೆ ಮೋಟಾರ ಸೈಕಲ್ ಲೈಸನ್ಸ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ಗಂಡನ ಲೈಸನ್ಸ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅದು ಕಳೆದು ಹೋಗಿರಬಹುದು ಎನ್ನುತ್ತಾರೆ. ಸದರಿ ನನ್ನ ಗಂಡನ ಲೈಸನ್ಸ ದ್ವೀ ಪ್ರತಿಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅಪಘಾತ ಸಮಯದಲ್ಲಿ ಅದು ಕಳೆದು ಹೋಗಿರುತ್ತದೆ ಎನ್ನುತ್ತಾರೆ. ಸದರಿ ದಿನ ಇನ್ನೊಂದು ಮೋಟಾರ ಸೈಕಲ್ ಎದುರುಗಡೆಯಿಂದ ಬಂದು ಅಪಘಾತ ಪಡಿಸಿರುತ್ತದೆ. ಸದರಿ ಅಪಘಾತ ನಡು ರಸ್ತೆಯಲ್ಲಿ ಎದುರು ಬದರು ಆಗಿರುತ್ತದೆ ಎಂದರೆ ಸಾಕ್ಷಿ ರಸ್ತೆಯ ಎಡಭಾಗದಲಲ್ ಆಗಿರುತ್ತದೆ ಎನ್ನುತ್ತಾರೆ. ಸದರಿ ಮೋಟಾರ ಸೈಕಲ್ ನಲ್ಲಿ ನಾನು ಹಾಗೂ ನನ್ನ ಗಂಡ ಮಾತ್ರ ಹೊರಟಿದ್ದೆವು ಸದರಿ ದಿನ ನನ್ನ ಗಂಡ ತನ್ನ ಮೋಟಾರ ಸೈಕಲ್ ನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಮೋಟಾರ ಸೈಕಲ್ ಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸಂಪೂರ್ಣವಾಗಿ ನನ್ನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಎದುರುಗಡೆಯಿಂದ ಬರುತ್ತಿದ್ದ ಮೋಟಾರ ಸೈಕಲ್ ಚಾಲಕನ ತಪ್ಪಿನಿಂದ ಆಗಿದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಇಬ್ರಾಹಿಂ ಸಾಬ ಕೂನೂರು ನನ್ನ ಗಂಡನ ತಮ್ಮ. ಸದರಿ ದಿನ ನನ್ನ ಗಂಡನ ತಮ್ಮ ಅಪಘಾತ ಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿರುತ್ತಾರೆ. ಸದರಿಯವರು ದೂರನ್ನು 3 ದಿನ

ವಿಳಂಬ ಮಾಡಿ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನಾವು ಆಸ್ಪತ್ರೆಯಲ್ಲಿ ಇದ್ದುದ್ದರಿಂದ ತಡವಾಗಿ ದೂರು ನೀಡಿರುತ್ತಾರೆ ಎನ್ನುತ್ತಾರೆ. ನನ್ನ ಗಂಡ ಅಪಘಾತವಾಗಿ 2 ತಿಂಗಳ ನಂತರ ತೀರಿಕೊಂಡಿರುತ್ತಾರೆ. ಅಪಘಾತವಾದ ತಕ್ಷಣ ನಾವು ತಿಳುವಳ್ಳಿಯ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾದೆವು. ಅದೇ ದಿನ ಸದರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಿಮ್ಸ ಆಸ್ಪತ್ರೆಗೆ ಹೋದೆವು. ನನ್ನ ಗಂಡ ಕಿಮ್ಸ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ ತೀರಿಕೊಂಡರು. ನಾವು ತಿಳುವಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತ ವಾಗಿದೆ ಎಂದು ದೂರು ದಾಖಲಿಸಿದರೆ ಪರಿಹಾರ ಬರುವುದಿಲ್ಲ ಎಂದು ತಿಳಿದು ಎದುರುಗಡೆಯಿಂದ ಬರುತ್ತಿದ್ದ ಮೋಟಾರ ಸೈಕಲ್ ಚಾಲನ ತಪ್ಪಿನಿಂದ ಅಪಘಾತವಾಗಿದೆ ಎಂದು 3 ದಿನ ವಿಳಂಬ ಮಾಡಿ ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನನ್ನ ಗಂಡ ತೀರಿಕೊಂಡ ಕಾರಣಕ್ಕೂ ಹಾಗೂ ಆತನಿಗೆ ಸದರಿ ಅಪಘಾತದಲ್ಲಿ ಆದ ಗಾಯಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಅನುಕೂಲವಾಗಲೆಂದು ನಿಪಿ-9 ರಿಂದ 74 ವೈಧ್ಯಕೀಯ ದಾಖಲೆಗಳನ್ನು ಸೃಷಿಸಿಕೊಂಡು ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ.

5. ಸದರಿ ನಮ್ಮ ಮೋಟಾರ ಸೈಕಲ್ ನ ಎದುರುಗಡೆಯಿಂದ ಬರುತ್ತಿದ್ದ ಮೋಟಾರ ಸೈಕಲ್ ನ ಚಾಲಕನಿಗೆ ಲೈಸನ್ಸ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಉದ್ದೇಶ ಪೂರ್ವಕವಾಗಿ ಈ ಅರ್ಜಿಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರಗಾಗಲಿ ಅಥವಾ ನನ್ನ ಅತ್ತೆ ನನ್ನ ಗಂಡನ ಅದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ 1 ನೇ ಎದುರುದಾರನ ಮೋಟಾರ ಸೈಕಲ್ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇಲ್ಲದೇ ಇದ್ದುದ್ದರಿಂದ ನಮಗೆ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ. ಎಸ್ ಜಿ ವಿ ವಕೀಲರಿಂದ

ಸದರಿ ಅಪಘಾತವಾದ ದಿನ ಮೋಟಾರ ಸೈಕಲ್ ಮೇಲೆ ನಾನು ಹಾಗೂ ನನ್ನ ಗಂಡ ಹೊರಟಿದ್ದೆವು. ನಾವು ಯಾವುದೇ ಬ್ಯಾಗ ನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ. ಸದರಿ ದಿನ ನನ್ನ ಗಂಡ ತನ್ನ ಮೋಟಾರ ಸೈಕಲ್ ಹ್ಯಾಂಡಲ್ ಮೇಲೆ ಬ್ಯಾಗ್ ಇಟ್ಟುಕೊಂಡಿದ್ದರಿಂದ ಸದರಿ ಹ್ಯಾಂಡಲ್ ಅಲುಗಾಡದೆ ಎದುರುಗಡೆಯಿಂದ ಬರುತ್ತಿದ ಮೋಟಾರ ಸೈಕಲ್ ಗೆ ನನ್ನ ಗಂಡ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ವಿಳಂಬ ಮಾಡಿ 1 ನೇ ಎದರುದಾರನ ಮೋಟಾರ ಸೈಕಲ್ ಚಾಕಲನ ಮೇಲೆ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನನ್ನ ಮೈದುನ ದಾಖಲಿಸಿರುತ್ತಾನೆ. ಸದರಿ ಎದುರುಗಾರನ ಮೋಟಾರ ಸೈಕಲ್ ಚಾಲಕ ನಮ್ಮ ವಿರುದ್ಧವೂ ಸಹ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ 1 ನೇ ಎದುರುದಾರನ ಮೋಟಾರ ಸೈಕಲ್ ಚಾಲಕನಿಗೆ ಚಾಲನಾ ಪರವಾನಿಗೆ ಇದ್ದುದ್ದರಿಂದ ಹಾಗೂ ಸದರಿ ಮೋಟಾರ ಸೈಕಲ್ ಊರ್ಜಿತವಾಗಿದ ವಿಮಾ ಸಹ ಇದ್ದುದ್ದರಿಂದ 1 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಕ್ಕೆ ಸಂಬಧಿಸಿದಂತೆ ಸಿ ಸಿ ಪ್ರಕರಣ 176/2023 ರಲ್ಲಿ ಸದರಿ ಮೋಟಾರ ಸೈಕಲ್ ನಿರ್ದೋಷಿ ಆಗಿದೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್